# All India Radio: Bangalore
# National Bulletin In Kannada
# 23.01.2026 19.35 hrs
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ದೇಶಾದ್ಯಂತ ನಾಳೆ ಹದಿನೆಂಟನೇ ಉದ್ಯೋಗ ಮೇಳ; ೬೧ ಸಾವಿರಕ್ಕೂ ಅಧಿಕ ನೇಮಕಾತಿ ಪತ್ರ ವಿತರಿಸಲಿರುವ ಪ್ರಧಾನಿ ನರೇಂದ್ರ ಮೋದಿ
- ಮೂರು ದಿನಗಳ ಪ್ರಜಾಪ್ರಭುತ್ವ ಮತ್ತು ಚುನಾವಣಾ ನಿರ್ವಹಣೆ ಕುರಿತ ಭಾರತೀಯ ಅಂತಾರಾಷ್ಟ್ರೀಯ ಸಮ್ಮೇಳನ ನವದೆಹಲಿಯಲ್ಲಿ ಸಂಪನ್ನ
- ತಮಿಳುನಾಡು, ಸರ್ಕಾರ ಬದಲಾವಣೆಗೆ ಸಿದ್ಧವಾಗಿದೆ - ಮಧುರಾಂತಕಂ ನಲ್ಲಿ ಪ್ರಧಾನಿ ಪ್ರತಿಪಾದನೆ
- ಛತ್ತೀಸ್‌ಗಢದ ಧಮ್ತಾರಿ ಜಿಲ್ಲೆಯಲ್ಲಿ ಶರಣಾದ ಒಂಬತ್ತು ಮಾವೋವಾದಿಗಳು; ಶಸ್ತ್ರಾಸ್ತ್ರ ವಶ
- ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿ; ೨ನೇ ಪಂದ್ಯದಲ್ಲಿಂದು ನ್ಯೂಜಿಲ್ಯಾಂಡ್ ವಿರುದ್ಧ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ

<>><><*><><<>

ದೇಶದ ಯುವಜನತೆಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಭಾಗವಾಗಿ, ನಾಳೆ ದೇಶಾದ್ಯಂತ ನಡೆಯಲಿರುವ ೧೮ನೇ ಆವೃತ್ತಿಯ 'ಉದ್ಯೋಗ ಮೇಳ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸುಮಾರು ೬೧ ಸಾವಿರಕ್ಕೂ ಅಧಿಕ ಯುವಕರಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ. ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪ್ರಧಾನಿ, ನೂತನವಾಗಿ ನೇಮಕಗೊಂಡ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈ ೧೮ನೇ ಉದ್ಯೋಗ ಮೇಳವನ್ನು ದೇಶಾದ್ಯಂತ ಒಟ್ಟು ೪೫ ಆಯ್ದ ಸ್ಥಳಗಳಲ್ಲಿ ಏಕಕಾಲದಲ್ಲಿ ಆಯೋಜಿಸಲಾಗಿದೆ. ಈ ಬಾರಿ ನೇಮಕಗೊಂಡ ಅಭ್ಯರ್ಥಿಗಳು ಕೇಂದ್ರ ಸರ್ಕಾರದ ವಿವಿಧ ಪ್ರಮುಖ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ ಕರ್ತವ್ಯಕ್ಕೆ ಸೇರಲಿದ್ದಾರೆ. ಇದರಲ್ಲಿ ಗೃಹ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಹಣಕಾಸು ಸೇವೆಗಳ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ನೇಮಕಾತಿಗಳು ಸೇರಿವೆ. ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಈ ಯೋಜನೆಯು, ಯುವಶಕ್ತಿಯನ್ನು ರಾಷ್ಟ್ರ ನಿರ್ಮಾಣದ ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಯೋಜನೆಯು ಆರಂಭವಾದಂದಿನಿಂದ ಇದುವರೆಗೆ ದೇಶಾದ್ಯಂತ ಸುಮಾರು ೧೧ ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ. ಪಾರದರ್ಶಕ ಮತ್ತು ತ್ವರಿತ ನೇಮಕಾತಿ ಪ್ರಕ್ರಿಯೆಯ ಮೂಲಕ ಯುವಜನತೆಗೆ ಸುಸ್ಥಿರ ಜೀವನೋಪಾಯ ಒದಗಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

<>><><*><><<>

ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ಪ್ರಜಾಪ್ರಭುತ್ವ ಮತ್ತು ಚುನಾವಣಾ ನಿರ್ವಹಣೆ ಕುರಿತ ಭಾರತೀಯ ಅಂತಾರಾಷ್ಟ್ರೀಯ ಸಮ್ಮೇಳನ-ಐಐಸಿಡಿಇಎಂ ಇಂದು ಸಂಪನ್ನಗೊಂಡಿದೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಯುಕೆ, ಅಮೆರಿಕ, ದಕ್ಷಿಣ ಆಫ್ರಿಕ, ಮಾಲ್ಡೀವ್ಸ್, ಬಾಟ್ಸ್ವಾನಾ, ಫಿಜಿ ಮತ್ತು ಝೆಕ್ ರಿಪಬ್ಲಿಕ್ ಸೇರಿದಂತೆ ಹಲವು ರಾಷ್ಟ್ರಗಳ ನೂರಕ್ಕೂ ಅಧಿಕ ಅಂತಾರಾಷ್ಟ್ರೀಯ ಪ್ರತಿನಿಧಿಗಳು ಪಾಲ್ಗೊಂಡರು. ನವದೆಹಲಿಯಲ್ಲಿಂದು ನಡೆದ ಸಮ್ಮೇಳನದ ಸಮಾರೋಪ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಕಾನೂನಿನ ಚೌಕಟ್ಟಿನ ಒಳಗಿರುವ ಎಲ್ಲಾ ಅರ್ಹ ಮತದಾರರ ಹೆಸರನ್ನು ಒಳಗೊಂಡಿರುವ ಶುದ್ಧ ಮತದಾರರ ಪಟ್ಟಿಯು ಪ್ರಜಾಪ್ರಭುತ್ವದ ಅಡಿಪಾಯವಾಗಿದೆ ಎಂದು ಹೇಳಿದ್ದಾರೆ. ಮೂರು ದಿನಗಳ ಐಐಸಿಡಿಇಎಂ ನಲ್ಲಿ ನಡೆದ ಚರ್ಚೆಯಲ್ಲಿ, ಪ್ರಮುಖ ಅಭಿಪ್ರಾಯಗಳನ್ನು ಐದು ಸ್ತಂಭಗಳಲ್ಲಿ ಸಂಕ್ಷೇಪಿಸಲಾಗಿದೆ. ಚುನಾವಣೆಗಳನ್ನು ಸುಲಭ ಮತ್ತು ಪಾರದರ್ಶಕವಾಗಿ ನಡೆಸಲು ಎಲ್ಲಾ ಮತದಾರರಿಗೆ ಫೋಟೋ ಗುರುತಿನ ಚೀಟಿಯನ್ನು ಒದಗಿಸಲು ಚುನಾವಣಾ ನಿರ್ವಹಣಾ ಸಂಸ್ಥೆಗಳು ಅಭಿವೃದ್ಧಿ ಹೊಂದಬೇಕು ಎಂದು ಅವರು ತಿಳಿಸಿದರು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಇಂದು ವಿವಿಧ ದೇಶಗಳ ನಿಯೋಗದೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಿದರು. ಸಭೆಗಳಲ್ಲಿ ವ್ಯಾಪಕ ಶ್ರೇಣಿಯ ಜಾಗತಿಕ ಚುನಾವಣಾ ಅನುಭವಗಳು ಮತ್ತು ನಾವೀನ್ಯತೆಗಳನ್ನು ಚರ್ಚಿಸಲಾಯಿತು. ಸಂವಾದಗಳ ಸಮಯದಲ್ಲಿ, ಭಾರತವು ಚುನಾವಣಾ ನಿರ್ವಹಣಾ ಸಂಸ್ಥೆಗಳೊಂದಿಗೆ ತಮ್ಮದೇ ಆದ ಕಾನೂನುಗಳ ಪ್ರಕಾರ ಆಯಾ ದೇಶಗಳಲ್ಲಿ ಇಸಿಐ-ನೆಟ್‌ಗೆ ಹೋಲುವ ತಂತ್ರಜ್ಞಾನ ವೇದಿಕೆಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಲು ಸಹಕರಿಸಲು ಮುಂದಾಯಿತು. ಭಾರತವು ಚುನಾವಣಾ ನಿರ್ವಹಣಾ ಸಂಸ್ಥೆಗಳ ಚುನಾವಣಾ ಅಧಿಕಾರಿಗಳಿಗೆ ಭಾರತೀಯ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ನಿರ್ವಹಣಾ ಸಂಸ್ಥೆಯ ಮೂಲಕ ತರಬೇತಿ ಬೆಂಬಲವನ್ನು ನೀಡಲು ಸಹ ಮುಂದಾಗಿದೆ.

<>><><*><><<>

ತಮಿಳುನಾಡು, ಸರ್ಕಾರ ಬದಲಾವಣೆಗೆ ಸಿದ್ಧವಾಗಿದೆ ಎಂದು ಬಿಜೆಪಿ ಹಿರಿಯ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಇಂದು ಪ್ರತಿಪಾದಿಸಿದ್ದಾರೆ. ಮಧುರಾಂತಕಂನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಡಿಎಂಕೆ ಆಡಳಿತವು, ಅಭಿವೃದ್ಧಿಯನ್ನು ನೀಡುವಲ್ಲಿ ವಿಫಲವಾಗಿದೆ. ಭ್ರಷ್ಟಾಚಾರ, ಅಪರಾಧ ಮತ್ತು ವಂಶಪಾರಂಪರ್ಯ ರಾಜಕೀಯದಿಂದ ಕೂಡಿದೆ ಎಂದು ದೂರಿದ್ದಾರೆ. ಡಿಎಂಕೆ ಸರ್ಕಾರವನ್ನು "ಸಿಎಂಸಿ - ಭ್ರಷ್ಟಾಚಾರ, ಮಾಫಿಯಾ ಮತ್ತು ಅಪರಾಧ" ಎಂದು ವಿವರಿಸಬಹುದಾಗಿದ್ದು, ತಮಿಳು ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುವಲ್ಲಿ ವಿಫಲವಾಗುವುದರ ಜೊತೆಗೆ ಯುವಕರು, ರೈತರು ಮತ್ತು ಮಹಿಳೆಯರ ಕಲ್ಯಾಣವನ್ನು ನಿರ್ಲಕ್ಷಿಸಿದೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಮಾದಕವಸ್ತು ಮಾಫಿಯಾಗಳು ಸಕ್ರಿಯವಾಗಿವೆ ಮತ್ತು ಮಹಿಳೆಯರ ಸುರಕ್ಷತೆ ಹದಗೆಟ್ಟಿದೆ ಎಂದು ಅವರು ಆರೋಪಿಸಿದರು. ರೈಲು ಯೋಜನೆಗಳಲ್ಲಿ ಏಳು ಪಟ್ಟು ಹೆಚ್ಚಳ, ೫೦ ಸಾವಿರ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳು, ಆರು ಕೋಟಿ ಮುದ್ರಾ ಸಾಲಗಳು ಮತ್ತು ನೇರ ಪ್ರಯೋಜನ ವರ್ಗಾವಣೆ ಸೇರಿದಂತೆ ಅಭಿವೃದ್ಧಿಗಾಗಿ ಎನ್‌ಡಿಎ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ತಮಿಳುನಾಡಿಗೆ ೧೧ ಲಕ್ಷ ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದೆ ಎಂದರು.

<>><><*><><<>

ಛತ್ತೀಸ್‌ಗಢದ ಧಮ್ತಾರಿ ಜಿಲ್ಲೆಯಲ್ಲಿ ಇಂದು ಒಂಬತ್ತು ಮಾವೋವಾದಿಗಳು ಶರಣರಾಗಿದ್ದಾರೆ. ಶರಣಾದ ಮಾವೋವಾದಿಗಳಲ್ಲಿ ಏಳು ಮಹಿಳಾ ಮಾವೋವಾದಿಗಳು ಸೇರಿದ್ದಾರೆ. ಅವರೆಲ್ಲರ

ಪತ್ತೆಗಾಗಿ ಒಟ್ಟು ನಲವತ್ತೇಳು ಲಕ್ಷ ರೂಪಾಯಿಗಳ ಬಹುಮಾನ ಘೋಷಿಸಲಾಗಿತ್ತು. ರಾಯ್‌ಪುರ ಶ್ರೇಣಿಯ ಪೊಲೀಸ್ ಮಹಾನಿರ್ದೇಶಕ ಅಮರೇಶ್ ಮಿಶ್ರಾ ಮತ್ತು ಧಮ್ತಾರಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಸೂರಜ್ ಸಿಂಗ್ ಪರಿಹಾರ್ ಅವರ ಸಮ್ಮುಖದಲ್ಲಿ ಮಾವೋವಾದಿಗಳು ಶರಣಾಗಿದ್ದಾರೆ. ಶರಣಾಗತಿಯ ಸಮಯದಲ್ಲಿ, ಅವರು ಹಲವು ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸಿದ್ದಾರೆ. ಪೊಲೀಸರ ಪ್ರಕಾರ, ಮಾವೋವಾದಿಗಳು ರಾಜ್ಯದ ಸೀತಾನದಿ ಪ್ರದೇಶದಲ್ಲಿ ಹಾಗೂ ನಾಗ್ರಿ, ಮೈನ್‌ಪುರ ಮತ್ತು ಗೋಬ್ರಾ ಪ್ರದೇಶಗಳಲ್ಲಿ ಸಕ್ರಿಯರಾಗಿದ್ದರು. ಅವರು ಹಲವು ಘಟನೆಗಳಲ್ಲಿ ಭಾಗಿಯಾಗಿದ್ದರೆಂಬ ಆರೋಪಗಳಿವೆ.

<>><><*><><<>

ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನಕ್ಕಾಗಿ ಪ್ರಧಾನಮಂತ್ರಿಗಳ ಪ್ರಮುಖ ವೇದಿಕೆಯಾದ ಪ್ರಗತಿ ತನ್ನ ಸಭೆಗಳನ್ನು ಯಶಸ್ವಿಯಾಗಿ ನಡೆಸುವುದರೊಂದಿಗೆ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಈ ವಿಶೇಷ ಸರಣಿಯಲ್ಲಿ, ಇಂದು ಮೌ-ಗಾಜಿಪುರ್-ತಾರಿಘಾಟ್ ಹೊಸ ಬ್ರಾಡ್‌ಗೇಜ್ ರೈಲ್ವೆ ಯೋಜನೆಯ ಯಶೋಗಾಥೆ ಕುರಿತ ವಿಶೇಷ ವರದಿ ಮೂಡಿಬರಲಿದೆ.

ಈ ಕುರಿತು ಒಂದು ವರದಿ: ಅಭಯ್ ( ೧ ನಿಮಿಷ)

ಉತ್ತರ ಪ್ರದೇಶದ ಪೂರ್ವಾಂಚಲ ಭಾಗದ ಆರ್ಥಿಕ ಚಿತ್ರಣವನ್ನೇ ಬದಲಿಸಬಲ್ಲ ೫೧ ಕಿಲೋಮೀಟರ್ ಉದ್ದದ ಮೌ - ಗಾಜಿಪುರ - ತಾರಿಘಾಟ್ ಹೊಸ ಬ್ರಾಡ್ ಗೇಜ್ ರೈಲ್ವೆ ಯೋಜನೆಯು ಸುಮಾರು ೧ ಸಾವಿರದ ೭೬೫ ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣಗೊಂಡಿದೆ. ಆರಂಭದಲ್ಲಿ ಭೂಸ್ವಾಧೀನದ ಅಡೆತಡೆಗಳು, ಅಂತರ-ಸಚಿವಾಲಯಗಳ ನಡುವಿನ ಅನುದಾನ ಹಂಚಿಕೆಯ ವಿವಾದ ಮತ್ತು ತಾಂತ್ರಿಕ ಸವಾಲುಗಳಿಂದಾಗಿ ಈ ಯೋಜನೆಯು ವಿಳಂಬವಾಗಿತ್ತು. ಆದರೆ, ೨೦೧೮ ರ ಸೆಪ್ಟೆಂಬರ್ ೨೬ ರಂದು ನಡೆದ 'ಪ್ರಗತಿ' ಸಭೆಯಲ್ಲಿ ಈ ಯೋಜನೆಯನ್ನು ಗಂಭೀರವಾಗಿ ಪರಾಮರ್ಶಿಸಿದ ಪ್ರಧಾನಮಂತ್ರಿಯವರು, ಕಾಲಮಿತಿಯೊಳಗೆ ತೊಡಕುಗಳನ್ನು ನಿವಾರಿಸಲು ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಿದರು. ಇದರ ಪರಿಣಾಮವಾಗಿ, ರೈಲ್ವೆ ಮತ್ತು ರಸ್ತೆ ಸಾರಿಗೆ ಸಚಿವಾಲಯಗಳ ನಡುವಿನ ಸಮನ್ವಯದೊಂದಿಗೆ ಗಂಗಾ ನದಿಯ ಮೇಲೆ ಅತ್ಯಾಧುನಿಕ ರಸ್ತೆ-ಸೇತುವೆ ನಿರ್ಮಾಣವಾಯಿತು ಹಾಗೂ ೨೦೨೪ ರ ಮಾರ್ಚ್ ೬ ರಂದು ಯೋಜನೆಯು ಸಂಪೂರ್ಣವಾಗಿ ಲೋಕಾರ್ಪಣೆಗೊಂಡಿತು. ಇಂದು ಈ ರೈಲ್ವೆ ಮಾರ್ಗವು ಪ್ರಾದೇಶಿಕ ಸಂಪರ್ಕವನ್ನು ಬಲಪಡಿಸುವುದಲ್ಲದೆ, ಸ್ಥಳೀಯ ಕೃಷಿ ಮತ್ತು ವ್ಯಾಪಾರೋದ್ಯಮಕ್ಕೆ ಹೊಸ ಹಾದಿಯನ್ನು ಸೃಷ್ಟಿಸಿಕೊಟ್ಟಿದೆ.

<>><><*><><<>

೭೭ನೇ ಗಣರಾಜ್ಯೋತ್ಸವದ ದಿನದ ಮೆರವಣಿಗೆಯಲ್ಲಿ ಭಾರತೀಯ ಸೇನೆ ದೇಶದ ಮೂರು ಸೇನಾಪಡೆಗಳ ವಿಜಯ ಮತ್ತು ಸಮನ್ವಯವನ್ನು ಪ್ರದರ್ಶಿಸುವ ಆಪರೇಷನ್ ಸಿಂಧೂರ್ ಕುರಿತ ಸ್ತಬ್ಧಚಿತ್ರವನ್ನು ಪ್ರದರ್ಶಿಸಲಿದೆ. ದೆಹಲಿಯಲ್ಲಿಂದು ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ದೆಹಲಿ ಉಪವಲಯ ಸಿಬ್ಬಂದಿ ಮುಖ್ಯಸ್ಥ ಮೇಜರ್ ಜನರಲ್ ನವರಾಜ್ ಧಿಲ್ಲಾನ್, ಮೆರವಣಿಗೆಯನ್ನು ನಾಲ್ಕನೇ ಬಾರಿ ಲೆಫ್ಟಿನೆಂಟ್ ಜನರಲ್ ಭವನೀಶ್ ಕುಮಾರ್ ಅವರು ಮುನ್ನಡೆಸಲಿದ್ದು, ಸುಮಾರು ಆರು ಸಾವಿರದ ೫೦ ಮಿಲಿಟರಿ ಸಿಬ್ಬಂದಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಆಪರೇಷನ್ ಸಿಂಧೂರ್ ಕುರಿತ ಸ್ತಬ್ಧಚಿತ್ರದಲ್ಲಿ ಸುಖೋಯ್-೩೦ ರ ಮೂಲಕ ಬ್ರಹ್ಮೋಸ್ ಕ್ಷಿಪಣಿಯ ಸಾಂಕೇತಿಕ ಉಡಾವಣೆಯೂ ಒಳಗೊಂಡಿರಲಿದೆ. ಈ ವರ್ಷದ

ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ವಿದ್ಯುತ್ ಸಚಿವಾಲಯವು, 'ಪ್ರಕಾಶ್ ಗಂಗಾ: ಆತ್ಮನಿರ್ಭರ್ ಮತ್ತು ವಿಕಸಿತ ಭಾರತಕ್ಕೆ ಶಕ್ತಿ' ಎಂಬ ಶೀರ್ಷಿಕೆಯ ಭವ್ಯ ಸ್ತಬ್ಧಚಿತ್ರವನ್ನು ಪ್ರಸ್ತುತಪಡಿಸಲಿದೆ.

<>><><*><><<>

ನವದೆಹಲಿಯಲ್ಲಿಂದು ರಾಷ್ಟ್ರೀಯ ಕೌಶಲ್ಯ ಶೃಂಗಸಭೆ ೨೦೨೬ ಅನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಉದ್ಘಾಟಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವರು, ಯುವಜನರು ತಮ್ಮ ನಿಜವಾದ ಸಾಮರ್ಥ್ಯವನ್ನು ಕಂಡುಕೊಳ್ಳಲು, ತಮ್ಮದೇ ಆದ ಮಾರ್ಗಗಳನ್ನು ಆರಿಸಿಕೊಳ್ಳಲು ಮತ್ತು ಕೌಶಲ್ಯಗಳನ್ನು ಸುಸ್ಥಿರ ಜೀವನೋಪಾಯವಾಗಿ ಪರಿವರ್ತಿಸಲು ಒಂದು ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಲಾಗಿದೆ ಭಾರತದ ಯುವಕರು ಇಂದು ಎಂದಿಗಿಂತಲೂ ಹೆಚ್ಚು ಪ್ರಬುದ್ಧರಾಗಿದ್ದಾರೆ ಎಂದು ಹೇಳಿದರು.

<>><><*><><<>

ಚತ್ತೀಸ್‌ಗಢದ ನವ ರಾಯ್‌ಪುರದಲ್ಲಿರುವ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಭಾರತ-ನ್ಯೂಜಿಲ್ಯಾಂಡ್ ನಡುವಿನ ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯ ಪ್ರಗತಿಯಲ್ಲಿದೆ. ಟಾಸ್ ಗೆದ್ದ ಭಾರತ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.  ಇತ್ತೀಚಿನ ವರದಿಯಂತೆ ನ್ಯೂಜಿಲ್ಯಾಂಡ್ ತಂಡ ೬ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೬೪ ರನ್ ಮಾಡಿ ಆಡುತ್ತಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ><><<>